## ದಾಸರು ಕಂಡ ರಾಯರು – ೧

# ಶರಣ ಸುರಭೂಜ ಗುರುರಾಜ

ಡಾ|| ಪಿ.ಆರ್. ಪಂಚಮುಖಿ, ಧಾರವಾಡ

ಪರಿಮಳ : ಆಗಸ್ಟ್ ೨೦೦೫ ಸಂಚಿಕೆ

ಶ್ರೀ ರಾಘವೇಂದ್ರ ತೀರ್ಥ ಶ್ರೀಪಾದಂಗಳವರು ಕಲಿಯುಗದ ಕಲ್ಪವೃಕ್ಷ. ಭಕ್ತರ ಕಾಮಧೇನು, ಗುರುರಾಜ, ಗುರುಸಾರ್ವಭೌಮ ಎಂದೇ ಪ್ರಸಿದ್ಧರಾಗಿದ್ದಾರೆ. ದೇವರೆಂದರೆ ತಿರುಪತಿಯ ತಿಮ್ಮಪ್ಪ, ಗುರುಗಳೆಂದರೆ ಮಂಚಾಲೆ ರಾಘಪ್ಪ ಎಂಬ ಮಾತು ವಾಡಿಕೆಯ ಮಾತಾಗಿಬಿಟ್ಟಿದೆ. ಶ್ರೀರಾಯರ ಮಠಗಳಲ್ಲಿ ನೆರೆಯುವ ಜನಸಮ್ಮರ್ದವನ್ನು ಕಂಡಾಗ ಶ್ರೀರಾಯರ ಮಹಿಮೆಯ ಬಗ್ಗೆ ಅರಿವು ಜನಸಾಮಾನ್ಯರಲ್ಲಿ ಬೇರೂರಿರುವದು ಸ್ಪಷ್ಟವಾಗಿ ಕಂಡು ಬರುವದು. ಇದೆಲ್ಲ ಕೇವಲ ಜನಜಂಗುಳಿಯ ಪರಿಪಾಟ – mob pshychology – ಅಲ್ಲ **ಪ್ರಯೋಜನಂ ಅನುದ್ದಿಶ್ಯ ನ ಮಂದೋಽಪಿ ಪ್ರವರ್ತತೇ** ಎಂದು ಗಾದೆ ಮಾತು. ತಮಗೆ ಲಾಭವಿಲ್ಲದೆಯೇ ಯಾರೂ – ಧಡ್ಡನಾದವನೂ – ಕೂಡ ಯಾವುದರಲ್ಲಿಯೂ ಪ್ರವೃತ್ತನಾಗಲಾರ ! ಎಲ್ಲರಿಗೂ ಶ್ರೀರಾಯರಿಂದ ಅನೇಕ ಪ್ರಯೋಜನಗಳು ಕೈಗೂಡುವವೆಂಬದು ಅನುಭವಸಿದ್ಧ. ಅಂತೆಯೇ ಜನರು ಈ ಪರಿ ಶ್ರೀರಾಯರ ಸೇವೆ ಆರಾಧನೆ ಮಾಡುತ್ತಾರೆ. ಅವರಿಂದ ಲೌಕಿಕ ವಿಷಯಗಳಲ್ಲಿ ಲಾಭ ಪಡೆದವರು ಎಷ್ಟೋ ಜನ. ಅವರ ಜ್ಞಾನಸುಧಾಪರಿಮಳದಿಂದ ಉಪಕೃತರಾದ ಜ್ಞಾನಪಿಪಾಸುಗಳು ಅನೇಕರು. ಹೀಗೆ ಪಾಮರ ಪಂಡಿತರಿಬ್ಬರಿಗೂ ಕೃಪೆದೋರುವ ಗುರುಗಳು ಶ್ರೀ ರಾಯರು, **ಶ್ರೀರಾಘವೇಂದ್ರಃ ಸಕಲಪ್ರದಾತಾ ! ಸರ್ವಾನಪಿ ಪುಮರ್ಥಾಂಶ್ಚ ದದಾತಿ ಗುರುರಾತ್ಮವಿತ್ !** – ಪರಮಾತ್ಮನ ಮಹಿಮೆಯನ್ನರಿತ ಶ್ರೀ ಗುರುರಾಜರು ಎಲ್ಲವನ್ನೂ – ಎಲ್ಲ ಪುರುಷಾರ್ಥಗಳನ್ನೂ ಕೂಡ ಕೊಡುವಂಥವರು ಎಂದು ಶ್ರೀಮತ್ ಅಪ್ಪಣಾಚಾರ್ಯರು ಸ್ತುತಿಸಿದ್ದಾರೆ. ಶ್ರೀರಾಯರ ಅಲೌಕಿಕ ವ್ಯಕ್ತಿತ್ವ ಹಾಗೂ ಮಹಿಮೆಗಳನ್ನು ಜನಸಾಮಾನ್ಯರಿಗೂ ತಿಳಿಯುವ ರೀತಿಯಲ್ಲಿ ಪ್ರಚಾರ ಪಡಿಸಿದವರು ಹರಿದಾಸರು. ಇದ್ದುದನ್ನು ಇದ್ದ ಹಾಗೆ ತಮ್ಮ ದಿವ್ಯದೃಷ್ಟಿಯಿಂದ ಕಂಡು ಆಡುಭಾಷೆಯಲ್ಲಿ ಹಾಡುವದೇ ಹರಿದಾಸರ ವೈಶಿಷ್ಟ್ಯ ! ಇಲ್ಲದುದನ್ನು ಕಲ್ಪನೆ

ಮಾಡುವ ಕಾವ್ಯವಲ್ಲ ಹರಿದಾಸ ಸಾಹಿತ್ಯ. ಪ್ರತಿಯೊಂದು ವಿಷಯವನ್ನೂ ತಾತ್ವಿಕ ದೃಷ್ಟಿ ಕೋಣದಿಂದ ವಿಮರ್ಶಿಸಿ ಪ್ರಸ್ತುತ ಪಡಿಸುವದು ಸಾಮಾನ್ಯವಾಗಿ ಹರಿದಾಸರ ಶೈಲಿ. ಅವರು ಶ್ರೀ ರಾಯರ ಬಗೆಗೆ ಜನರಲ್ಲಿದ್ದ ಭಕ್ತಿವಿಶೇಷವನ್ನೇ ನಿರೂಪಿಸಿ ಅವರಿಗೆ ಮತ್ತು ತಮಗೆ ಸ್ವಂತ ಬಂದ ಅನುಭವಗಳನ್ನು ಹಾಗೂ ಅವುಗಳ ತಾತ್ವಿಕ ನೆಲೆಗಟ್ಟನ್ನು ತಮ್ಮ ಹಾಡುಗಳಿಂದ ತಿಳಿಯಪಡಿಸಿದ್ದಾರೆ.

ಪ್ರಸ್ತುತ ಲೇಖನದಲ್ಲಿ ಹರಿದಾಸರು ಶ್ರೀರಾಯರನ್ನು ಹೇಗೆ ಅರಿತಿದ್ದಾರೆಂಬುದರ ಬಗ್ಗೆ ಪ್ರಧಾನವಾದ ಕೆಲವೇ ವಿಷಯಗಳನ್ನು ಲೇಖನದ ಎರಡು ಭಾಗಗಳಲ್ಲಿ ದಿಗ್ದರ್ಶನ ರೂಪವಾಗಿ ತಿಳಿಸಲು ಪ್ರಯತ್ನಿಸಲಾಗಿದೆ. ಮೊದಲನೆಯ ಭಾಗದಲ್ಲಿ ಶ್ರೀರಾಯರು ಇಷ್ಟಾರ್ಥಪ್ರದರು – ಕಾಮಧೇನು, ಕಲ್ಪವೃಕ್ಷ ಎಂಬ ಬಗ್ಗೆ ಬೇರೆ ಬೇರೆ ಕಾಲದಲ್ಲಿ ಆಗಿ ಹೋದ ಎಲ್ಲ ದಾಸರಲ್ಲಿ ಹೇಗೆ ಐಕಮತ್ಯವಿದೆ ಎಂಬುದನ್ನು ಅವರ ಹಾಡುಗಳಿಂದಲೇ ತೋರಿಸಲು ಪ್ರಯತ್ನಿಸಲಾಗಿದೆ. ಇಷ್ಟಾರ್ಥಗಳನ್ನು ಪೂರೈಸುವಲ್ಲಿ ಶ್ರೀರಾಯರು ಹೇಗೆ ನಿಷ್ಪಕ್ಷಪಾತಿಗಳು ಹಾಗೂ ಹೇಗೆ ಅವರು ದೀನರ ಉದ್ಧಾರಕರು ಎಂಬುದನ್ನು ದಾಸರು ಕಂಡ ವಿಷಯವನ್ನು ಎರಡನೆಯ ಭಾಗದಲ್ಲಿ ವಿಶ್ಲೇಷಿಸಲಾಗಿದೆ. ಇಲ್ಲಿ ಶ್ರೀರಾಯರ **ಸಮದರ್ಶಿತ್ವದ** ಬಗ್ಗೆ ಹರಿದಾಸರ ಅಭಿಪ್ರಾಯವನ್ನು ಪ್ರಸ್ತುತ ಪಡಿಸಲಾಗಿದೆ. ಶ್ರೀರಾಯರ ಮೂಲರೂಪ ಅವತಾರಗಳನ್ನು ಕುರಿತು, ಶ್ರೀರಾಯರ ಬೃಂದಾವನದ ಅಲೌಕಿಕತೆಯನ್ನು ಕುರಿತು, ಅವರು ಬೃಂದಾವನದಲ್ಲಿ ಹೇಗೆ ಕಾಣುವರು, ಸ್ವಪ್ನದಲ್ಲಿ ಹೇಗೆ ಕಂಡಿದ್ದಾರೆ ಇತ್ಯಾದಿಯಾಗಿ ಶ್ರೀರಾಯರ ಬಗ್ಗೆ ಅನೇಕ ವಿಷಯಗಳನ್ನು ಕುರಿತು ಕೂಡ ದಾಸರು ಸುಂದರವಾದ ಕೀರ್ತನೆಗಳನ್ನು ರಚಿಸಿದ್ದಾರೆ. ಆದರೆ ಲೇಖನದ ಗಾತ್ರವನ್ನನುಲಕ್ಷಿಸಿ ಪ್ರಸ್ತುತ ಲೇಖನದಲ್ಲಿ ಈ ಎಲ್ಲ ವಿಷಯಗಳ ವಿವೇಚನೆ ಮಾಡಲು ಸಾಧ್ಯವಾಗಿರುವುದಿಲ್ಲ. ಕೇವಲ ಮೇಲೆ ನಿರ್ದಿಷ್ಟವಾದ ಎರಡು ವಿಷಯಗಳನ್ನು ಮಾತ್ರ ಇಲ್ಲಿ ಪ್ರಸ್ತುತಪಡಿಸಲು ಪ್ರಯತ್ನಿಸಲಾಗಿದೆ.

## ಶ್ರೀರಾಯರು ಇಷ್ಟಾರ್ಥಪ್ರದರು ಹಾಗೂ ಕರುಣಾಪೂರ್ಣರು ಎಂಬ ಬಗ್ಗೆ ಹರಿದಾಸರಲ್ಲಿ ಐಕಮತ್ಯ

ದಾಸರ ಪದಗಳಲ್ಲಿ ಶ್ರೀರಾಯರನ್ನು ಕಲ್ಪವೃಕ್ಷ, ಕಾಮಧೇನು ಎಂದು ಏಕಕಂಠದಿಂದ ಸ್ತುತಿಸಲಾಗಿದೆ. **ಭಜತಾಂ ಕಲ್ಪವೃಕ್ಷಾಯ ನಮತಾಂ ಕಾಮಧೇನವೇ** ಎಂದವರ ಪ್ರತಿಧ್ವನಿಯಾಗಿವೆ. ಈ ಸ್ತುತಿಪರ ಪದ್ಯಗಳು, ಯಾವ ಯಾವ ಇಷ್ಟಾರ್ಥಗಳನ್ನು ಶ್ರೀರಾಯರು ದಯಪಾಲಿಸುವರು ಎಂಬ ಬಗ್ಗೆ ಬೇರೆ ಬೇರೆ ದಾಸರು ಬೇರೆ ಬೇರೆ ರೀತಿಯಿಂದ ಹೇಳಿದ್ದರೂ ಶ್ರೀರಾಯರು ಎಲ್ಲ ಇಷ್ಟಾರ್ಥಗಳನ್ನು ಕೊಡುವ ಮಹಾಮಹಿಮರು ಎಂಬುದು **ಬೇರೆ ಬೇರೆ ಕಾಲಗಳಲ್ಲಿ ಆಗಿ ಹೋದ** ಎಲ್ಲ ದಾಸರ ಪದಗಳಿಂದ ಸ್ಪಷ್ಟವಾಗುವುದು.

**ವರಗಳ ಈಡು ಇಲ್ಲದೆ ಕೊಡುವ ಗುರುಗಳ . . . ನೋಡಿದೆ ಗುರುಗಳ ನೋಡಿದೆ** ಎಂದು ವಿಜಯದಾಸರು ಒಂದು ಪದ್ಯದಲ್ಲಿ ಹೇಳಿದರೆ ಇನ್ನೊಂದು ಪದ್ಯದಲ್ಲಿ ಅವರೇ **ಚಿಂತಾಮಣಿ ಕಂಡ ಮೇಲೆ ಭ್ರಾಂತಿಗೊಳಿಪ ವಿಷಯ ಚಿಂತಿಸಿ ಬೇಡುವುದು ಲೋಕಾಂತ(ರ)ದ ಸುಖವು** ಎಂದು ಎಚ್ಚರಿಸಿದ್ದಾರೆ. ಲೌಕಿಕ ವಿಷಯಗಳ ಬಗ್ಗೆ ವರಗಳನ್ನು ಬೇಡದೇ ಮೋಕ್ಷಸಾಧನೆಯ ಬಗ್ಗೆ ಗುರುರಾಜರನ್ನು ಬೇಡಬೇಕು ಎಂಬ ಮಾರ್ಮಿಕ ಸೂಚನೆ ಇಲ್ಲಿದೆ. **ನವಿತ್ತೇನ ತರ್ಪಣಿಯೋ ಮನುಷ್ಯಃ** ಎಂದು ನಚಿಕೇತ ಎಚ್ಚರಿಸಿರಲಿಲ್ಲವೇ ? ಐಹಿಕ ಸಂಪತ್ತು ಎಷ್ಟು ದೊರಕಿದರೂ ತೃಪ್ತಿಯಾಗದು. ಏಕೆಂದರೆ ಮನುಷ್ಯನಿಗೆ ತನ್ನ ಹಿತವಾವುದು ಮತ್ತು ಏನು ಸಿಕ್ಕರೆ ತನ್ನ ಹಿತವಾಗುವದು ಎಂಬುದೇ ತಿಳಿದಿರುವುದಿಲ್ಲ. ಕಾರಣ ಬೇಡುವಾಗ ಐಹಿಕ ಸಂಪತ್ತನ್ನು ಅಪೇಕ್ಷಿಸಿ ಬೇಡದೆ ನಿಶ್ಚಿತವಾಗಿಯೂ ಸುಖಕರವಾದ ಪರಲೋಕದ ಸುಖವನ್ನು ಅಪೇಕ್ಷಿಸಿ ಬೇಡಬೇಕು ಎಂಬುದೇ ಇಲ್ಲಿ ಹಾರ್ದ. ಬೇಡುವಾಗ ಕೊಡುವವರ ಸಾಮರ್ಥ್ಯ ಹಾಗೂ ದೃಷ್ಟಿಕೋನಗಳನ್ನೂ ಮನಸ್ಸಿನಲ್ಲಿಟ್ಟುಕೊಳ್ಳುವದವಶ್ಯವಿದೆ. ಕಲ್ಪವೃಕ್ಷದ ಮುಂದೆ ನಿಂತು ಒಂದು ದಿನ ಮೃಷ್ಟಾನ್ನ ಭೋಜನ ಬೇಡಿದರೆ ? **ರಥವಾನೇರಿದಾ ರಾಘವೇಂದ್ರ ...** ಎಂಬ ಪದದಲ್ಲಿ ಗೋಪಾಲದಾಸರು **'ನತರಾಗಿಹರಿಗೆ ಗತಿನೀಡದೆ ಸರ್ವಥ ನಾ ಬಿಡೆನೆಂದು'** ಎಂದು ಹೇಳಿ ಇದನ್ನೇ ಸ್ಪಷ್ಟಪಡಿಸಿದ್ದಾರೆ. ಶ್ರೀರಾಯರು ಶರಣಾಗತರಿಗೆ ಸದ್ಗತಿಯನ್ನು ನೀಡುವ ಪರಮ ಸಾಮರ್ಥ್ಯ ಹೊಂದಿದ ಮಹಾಮಹಿಮರವರು ! ಭಕ್ತರು ಸದ್ಗತಿಯನ್ನು ಹೊಂದಬೇಕಾದರೆ ಅವರು ಅದಕ್ಕೆ ಅರ್ಹತೆಯನ್ನು ಪಡೆಯಬೇಕಾಗುವುದು. ಭಕ್ತರ ಪಾಪನಿವೃತ್ತಿಯಾದ ಬಳಿಕ ಅವರಿಗೆ ಸದ್ಗತಿ ಪಡೆಯಲು ಯೋಗ್ಯತೆ ಲಭಿಸುವದಷ್ಟೆ! ಶ್ರೀರಾಯರು ತಮ್ಮ ದೃಷ್ಟಿ ಮಾತ್ರದಿಂದ

ಭಕ್ತರ ಪಾಪಗಳನ್ನು ನಿವಾರಣೆ ಮಾಡುವಂಥ ಶಕ್ತಿಯುಳ್ಳವರು – **ಅಘಾದ್ರಿ ಸಂಭೇದನದೃಷ್ಟಿವಜ್ರರು.** **ಕರುಣಾಪಯೋನಿಧಿಯೆ ಕರವ ಪಿಡಿದು ಎನ್ನ ಕರಣಶುದ್ಧನ ಮಾಡೋ ಕರೆವೆ ಮಸ್ತಕ ಬಾಗಿ** ಎಂದು ವಿಜಯರಾಯರು ಶ್ರೀರಾಯರು ತ್ರಿಕರಣಶುದ್ಧಿಯನ್ನು ದಯಪಾಲಿಸುವ ಮಹಾಮಹಿಮರೆಂದು ಕರೆದಿದ್ದಾರೆ. ಇದನ್ನೇ ಗೋಪಾಲರಾಯರು **ಗುರುರಾಘವೇಂದ್ರರ ಚರಣ ಕಮಲವನ್ನು ಸ್ಮರಿಸುವ ಮನುಜರಿಗೆ ಕರೆಕರೆಗೊಳಿಸುವ ದುರಿತದುಷ್ಕೃತವೆಲ್ಲ ಕರಿಯು ಸಿಂಹನ ಕಂಡ ತೆರೆನಾಗುವದಯ್ಯ ವೇಂಕಾರೋ ವಾಂಛಿತಪ್ರದಃ । ರಾಘವೇಂದ್ರಯತಿಸ್ತಸ್ಮಾತ್ ಲೋಕೇ ಖ್ಯಾತೋ ಭವಿಷ್ಯತಿ ॥ . . .** ಎಂಬುದನ್ನೇ ಗೋಪಾಲರಾಯರು **ರಾ ಎನ್ನೆ ರಾಶಿದೋಷಗಳನ್ನೆ ದಹಿಸುವ . . .** ಇತ್ಯಾದಿಯಾಗಿ ರಾಘವೇಂದ್ರ ಎಂಬ ನಾಮದ ವೈಶಿಷ್ಟ್ಯವನ್ನು ತಿಳಿಸಿದ್ದಾರೆ. ಅವರ ಶ್ರೀರಾಯರ ಸುಳಾದಿಯಲ್ಲಿಯೂ ಈ ವಿಷಯವೇ ಪ್ರತಿಪಾದಿಸಲ್ಪಟ್ಟಿದೆ. ಜಗನ್ನಾಥ ದಾಸರು **ಸಂದರುಶನ ಮಾತ್ರದಲಿ ಮಹತ್ಪಾಪ ಪರಿದೋಡಿಸಲಾಪ** ಎಂದು ಅವರು ಪಾಪನಿವೃತ್ತಿ ಮಾಡಿಸುವ ಪರಮಕರುಣಾಳುಗಳು ಎಂದು ವರ್ಣಿಸಿದ್ದಾರೆ. ಗುರುಶ್ರೀಶವಿಟ್ಠಲಾಂಕಿತರು **‘ದೃಷ್ಟಿಯಿಂದಲಿ ನೋಡಲನೇಕಜನ್ಮದ ಪಾಪ ಬಿಟ್ಟು ಪೋಪವೋ ಕ್ಷಣದಲಿ’** ಎಂದು ಘೋಷಿಸಿದ್ದಾರೆ. ಜಗನ್ನಾಥದಾಸರು ಶ್ರೀರಾಯರನ್ನು ತ್ರಿದಶಭೂರುಹ, ಮಂದಾರತರುವಂತೆ, ಸುರತರುವಿನಂತಿಪ್ಪ, ಕಾಮದೇನುವಿನಂತೆ ಇಪ್ಪ ಆರಾಧಿಪ ಭಕ್ತರಭೀಷ್ಟವ ಪೂರೈಸುವ ಪ್ರಭು, ಸೇವಿಪರ ಸರ್ವಾರ್ಥಪ್ರದ . . . ಇತ್ಯಾದಿಯಾಗಿ ಮುಕ್ತಕಂಠದಿಂದ ಸ್ತುತಿಸಿದ್ದಾರೆ. ಶ್ರೀದವಿಟ್ಠಲರು ಇವರನ್ನು **ಶರಣರ ಸಂಜೀವ** ಎಂದು ಹೇಳಿ ಸಂಜೀವಿನಿಗೆ ಹೋಲಿಸಿ **ರೋಗಹರನೆ ಕೃಪಾಸಾಗರ** ಎಂದು ಜಗನ್ನಾಥದಾಸರು ಕೊಟ್ಟ ವಿಶೇಷಣವನ್ನು ಪುಷ್ಟೀಕರಿಸಿದ್ದಾರೆ. **ಶ್ರಿತಜನನುತ ಕಾಮಿತತರು ಸುರಧೇನು ಚಿಂತಾಮಣಿ** ಎಂದು ಒಂದೇ ಉಸುರಿನಲ್ಲಿ ಅವರ ಇಷ್ಟಾರ್ಥಪ್ರದತ್ವದ ವೈಶಿಷ್ಟ್ಯವನ್ನು **ಬಾಗಿ ಭಜಿಸಿರೋ ರಾಘವೇಂದ್ರಯತಿಯ ಕೊಡುವನು ಸದ್ಗತಿಯ** ಎಂಬ ಪದದಲ್ಲಿ ಹೊಗಳಿಸಿದ್ದಾರೆ. ಕಮಲೇಶವಿಟ್ಠಲಾಂಕಿತರು ಅವರನ್ನು **ಶರಣರ ಸುರಭೂಜ – ಗುರುರಾಜ** ಎಂದು ಕುಣಿಯುವ ಪದಗಳಿಂದ ಸ್ತುತಿಸಿದ್ದಾರೆ.

ಕಾರುಣ್ಯಸಿಂಧುತ್ವ, ಅತ್ಯಂತದಯಾಲುತ್ವ ಎಂಬ ಶ್ರೀರಾಯರ ಗುಣಗಳು ದಾಸರ ಪದಗಳಿಂದ ವ್ಯಕ್ತವಾಗುವುವು. **ಬಾರೋ ರಾಘವೇಂದ್ರ ಬಾರೋ** ಎಂಬ

ಪದದಲ್ಲಿ ಜಗನ್ನಾಥದಾಸರು **ಕಾರುಣ್ಯವಾರಿಧಿ ಬಾರೋ** ಎಂದು ಕರೆದಿದ್ದಾರೆ. ಸಂಸ್ಕೃತಪದಮಿಶ್ರಿತ ಪದದಲ್ಲಿ ಅವರೇ ಶ್ರೀರಾಯರನ್ನು **ಕ್ಷಮಾಸಂಪನ್ನ** ಎಂದು ಕರೆದರೆ ಗುರುಗೋಪಾಲವಿಟ್ಠಲಾಂಕಿತರು **ಆರ್ತಜನಪಾಲ ಅತಿದಯಾಪಾಂಗ, ಅತಿದಯಾಸಿಂಧು** ಎಂದು ಸ್ತುತಿಸಿದ್ದಾರೆ. ಅವರೇ ಶ್ರೀರಾಯರನ್ನು **ಪತಿತೋದ್ಧಾರಿಯೆ ಪಾವನ ಕಾರಿಯೆ** ಎಂದು ಕರೆದಿದ್ದಾರೆ. ವಿಜಯದಾಸರು ತಮ್ಮ **ಪರಮಮಂಗಳಮೂರುತಿ–ದಿವ್ಯಕೀರುತಿ** ಎಂಬ ಪದದಲ್ಲಿ ಅವರನ್ನು **ಕರುಣಾಪಯೋನಿಧಿಯೆ** ಎಂದು ಕರೆದಿದ್ದಾರೆ. ಕ್ಷಮಾಗುಣವು ಭಾಗವತೋತ್ತಮರ ಲಕ್ಷಣ. ಮಹಾಭಾಗವತೋತ್ತಮರಾದ ಶ್ರೀರಾಯರಲ್ಲಿ ಈ ಗುಣವನ್ನು ದಾಸರಾಯರು ವಿಪುಲವಾಗಿ ಕಂಡಿದ್ದಾರೆ. **ಶ್ರುತಿಃ ಕ್ಷಮಾದಮೋऽಸ್ತೇಯಂ ಶೌಚಂ ಇಂದ್ರಿಯನಿಗ್ರಹಃ । ಧೀರ್ವಿದ್ಯಾ ಸತ್ಯಮಕ್ರೋಧೋ ದಶಕಂ ಧರ್ಮ ಲಕ್ಷಣಮ್ ॥** ಎಂದು ಹತ್ತು ಪ್ರಕಾರ ಧರ್ಮಗಳನ್ನು ಮನುಸ್ಮೃತಿ ಹೇಳುತ್ತದೆ. ಜಗನ್ನಾಥದಾಸರು ತಮ್ಮ ಸಂಸ್ಕೃತಮಯಪದದಲ್ಲಿ ಶ್ರೀರಾಯರನ್ನು **ಧನ್ಯಕ್ಷಮಾಸಂಪನ್ನ** ಎಂದು ಕರೆದಿದ್ದಾರೆ. ಭಕ್ತರನ್ನು ಕಂಡರೆ ಅವರು ಕರುಳು ಕರಗಿ ಬಿಡುವದು. ಶ್ರೀರಾಘವೇಂದ್ರ–ವಿಜಯಕಾರರು ಇದನ್ನೇ **ಚಿತ್ತೇ ಚೇತ್ ಮೃದುತಾ ಶಿರೀಷಸದೃಶೇ ಹೈಯಂಗವೀನಂ ಶಿಲಾ** – ಅವರ ಹೃದಯ ಹೂವಿಗಿಂತಲೂ ಮೃದು. ಅವರ ಹೃದಯದ ಮಾರ್ದವದೆದುರು ಬೆಣ್ಣೆಯೂ ಕೂಡ ಕಲ್ಲಿನಂತೆ ತೋರುವದು ಎಂಬ ಅಲಂಕಾರಿಕವಾಗಿ ಹೇಳಿದ್ದನ್ನು ಜ್ಞಾಪಿಸಿಕೊಳ್ಳಬೇಕು. **'ಕರೆದಲ್ಲಿಗೆ ಬರುವ'** ಎಂಬ ಶ್ರೀದವಿಟ್ಠಲರ ವರ್ಣನೆಯಿಂದ **ಕರೆದರೆ ಬರುವಿಯೆಂದು ಸಾರುವದು ಡಂಗುರ ತ್ವರಿತದಿ ಒದಗೊ ಬಂದು** ಎಂಬ ಗುರುಶ್ರೀಶವಿಟ್ಠಲಾಂಕಿತರ ಪದದಿಂದ ಗುರುಗಳ ಹೃದಯದ ಮಾರ್ದವವನ್ನು ಅರಿಯಬಹುದು.

ಶ್ರೀರಾಯರ ಹೃದಯಮಾರ್ದವ ಅವರ ಗ್ರಂಥಗಳಿಂದಲೂ ಸ್ಪಷ್ಟವಾಗುವದು. ಅವರೆಂದೂ ಇನ್ನೊಬ್ಬ ಗ್ರಂಥಕರ್ತರ ವಿನಾಕಾರಣ ವಿಮರ್ಶೆಗೆ ಹೋಗಲಾರರು. ತಮ್ಮ ಪಾಂಡಿತ್ಯಪ್ರದರ್ಶನ ಮಾತಂತೂ ಸುತರಾಂ ಇಲ್ಲ. ಆಚಾರ್ಯರ ಶಾಸ್ತ್ರದ ಬಗ್ಗೆ ಗ್ರಂಥ ಕರ್ತೃಗಳಲ್ಲಿ ಅಪಾತತಃ ಭೇದ ಕಂಡಿದ್ದರೆ ಸಮನ್ವಯವನ್ನು ಮಾಡಿ ಪ್ರತಿಯೊಂದು ಅಭಿಪ್ರಾಯಕ್ಕೆ ಸಾರ್ಥಕ್ಯ ತೋರಿಸುವ ಶೈಲಿ ಶ್ರೀರಾಯರದು. **ಚಿತ್ತೇ ನ ಅಯುಕ್ತಂ ಅರ್ಥಂ ಕಲಯತಿ, .... ಸದ್ಭಿಃ ಸಾಕಂ ನ ಮೀಮಾಂಸತೇ** ಎಂದು ಶ್ರೀವಾದೀಂದ್ರತೀರ್ಥರು ತಮ್ಮ ಗುರುಗುಣಸ್ತವನದಲ್ಲಿ

ಹೇಳಿದ್ದು ಎಷ್ಟು ಸಮರ್ಪಕ ! ಅಲ್ಲದೆ ಶಾಸ್ತ್ರವಿಚಾರದ ಸಂದರ್ಭದಲ್ಲಿ ಜಿಜ್ಞಾಸುಗಳ ಮನದಲ್ಲಿ ಬರುವ ಶಂಕೆಗಳನ್ನು ತಾವೇ ಊಹಿಸಿಕೊಂಡು ಅವುಗಳಿಗೆ ಹಿತಮಿತವಾದ ರೀತಿಯಲ್ಲಿ ಸಮಾಧಾನ ಹೇಳುವದು ಅವರ ಪರಮ ಕಾರುಣ್ಯಕ್ಕೆ ಇನ್ನೊಂದು ನಿದರ್ಶನ. ಗುರುಜಗನ್ನಾಥವಿಟ್ಠಲಾಂಕಿತರು ಇದನ್ನೇ ಮನದಲ್ಲಿಟ್ಟುಕೊಂಡು **ಮತಿಯುತ ಪಂಡಿತತತಿಯಭಿಲಾಷವ ಸತತ ಪೂರ್ತಿಪನ್ಯಾರೇ ಪೇಳಮ್ಮಯ್ಯ** ಎಂದು ಉದ್ಗರಿಸಿದ್ದಾರೆ. ಅದಕ್ಕೇನೇ ಅವರನ್ನು ಇನ್ನೊಂದು ಪದದಲ್ಲಿ ಅವರೇ **ಕೋವಿದ ಕುಲಸಂಭಾವಿತ** ಎಂದು ಕರೆದಿದ್ದಾರೆ. ಈ ದಾಸವರ್ಯರು ಶ್ರೀರಾಯರನ್ನು ಎಷ್ಟು ರೀತಿಯಿಂದ ಕೊಂಡಾಡಿದ್ದಾರೆಂಬುದನ್ನು ನೋಡಿದರೆ ಶ್ರೀರಾಯರ ಗುಣಗಳ ಬಗ್ಗೆ ಸ್ವಲ್ಪ ಮಟ್ಟಿಗಾದರೂ ಕಲ್ಪನೆ ಬರಲು ಸಾಕು.

ಅಂತು, ಬೇರೆ ಬೇರೆ ಕಾಲದಲ್ಲಿ ಆಗಿ ಹೋದ ದಾಸರು ಶ್ರೀರಾಯರ ಅಪೇಕ್ಷಿತಪ್ರದಾತೃತ್ವದ ಬಗ್ಗೆ ವರ್ಣಿಸಿದ್ದನ್ನು ನೋಡಿದರೆ ಅವರು ಭಕ್ತರ ಬಗ್ಗೆ ಬಹಳ ಕರುಣಾಪೂರ್ಣರಾದ ಗುರುಗಳೆಂಬ ಖ್ಯಾತಿಯು ಪ್ರಾಚೀನ ಕಾಲದಿಂದಲೂ ಇದ್ದ ವಿಷಯ ತಿಳಿಯುವುದು. ಶ್ರೀರಾಯರ ಸಮಕಾಲೀನರಾದ ಶ್ರೀ ಅಪ್ಪಣಾಚಾರ್ಯರು ಗುರುಸ್ತೋತ್ರದ ಕೊನೆಗೆ **ಇಷ್ಟಾರ್ಥಸಮೃದ್ಧಿರೇವ ಕಮಲಾನಾಥ ಪ್ರಸಾದೋದಯಾತ್** ಎಂದು ಆಗಲೇ ಉದ್ಗರಿಸಿದ್ದನ್ನು ಹಾಗೂ ಆ ಉದ್ಗಾರಕ್ಕೆ ಶ್ರೀರಾಯರ ಸಮ್ಮತಿ ಸಿಕ್ಕಿದ್ದಿತೆಂಬುದನ್ನೂ ನೆನಪಿಸಿಕೊಂಡಾಗ ಶ್ರೀರಾಯರ ಬೃಂದಾವನ ಪ್ರವೇಶದ ಮೊದಲೂ ಕೂಡ ಅವರು ಸರ್ವಾಭೀಷ್ಟಪ್ರದಾತೃಗಳೆಂಬ ಕೀರ್ತಿಯು ಎಲ್ಲೆಡೆಗೆ ಹಬ್ಬಿದ್ದಿತೆಂಬುದು ತಿಳಿಯುವದು. ಎಲ್ಲ ದಾಸರ ಹಾಡುಗಳಲ್ಲಿ ಶ್ರೀರಾಯರು ಜನರ ಕಣ್ಣಿಗೆ ಕಾಣುವಾಗಲೇ ಹೇಗೆ ಅನೇಕರ ಮನೋಽಭೀಷ್ಟಗಳನ್ನು ಪೂರೈಸುತ್ತಿದ್ದರು ಎಂಬ ವಿಷಯವು ಚಿತ್ರಿಸಲ್ಪಟ್ಟಿದೆ. ಈ ವಿಷಯಗಳು ಪರಂಪರೆಯಿಂದ ಅನೇಕ ದಾಸರ ಕಾಲದಲ್ಲಿಯೂ ಬಾಯಿಮಾತಾಗಿರಬೇಕು. ಮೇಲೆ ಹೇಳಿದಂತೆ ದಾಸರು ಸಮಾಜದಲ್ಲಿಯ ಎಲ್ಲರ ಅನುಭವಗಳನ್ನೇ ಕ್ರೋಢೀಕರಿಸಿ ಶ್ರೀರಾಯರನ್ನು ವರ್ಣಿಸಿದ್ದು ಅವರ ಪದಗಳು ಉತ್ಪ್ರೇಕ್ಷೆಯ ಮಾತುಗಳಿಂದ ಕೂಡಿದ ಕಾವ್ಯಗಳಲ್ಲವೆಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು.

**ಶ್ರೀರಾಯರ ಸಮದರ್ಶಿತ್ವದ ಬಗ್ಗೆ ಹರಿದಾಸರು**

ಶ್ರೀರಾಯರು ತಮ್ಮ ಸೇವೆ ಮಾಡುವವರ ಬಗ್ಗೆ ಬಹಳ ವೈಶಿಷ್ಟ್ಯಪೂರ್ಣವಾದ **ಸಮಾನತೆಯ ಭಾವವನ್ನು** ಇಟ್ಟುಕೊಂಡು ಮಹಾ ಕರುಣಾಳುಗಳಾದ ಗುರುಗಳೆಂಬುದು ಅವರ ಅಸಂಖ್ಯ ಭಕ್ತ ಸಮುದಾಯದಲ್ಲಿಯ ವ್ಯಕ್ತಿಗಳ ಹಿನ್ನಲೆಯನ್ನು ಅವಲೋಕಿಸಿದಾಗ ಗಮನಕ್ಕೆ ಬರುವುದು. ಇದು ಅವರದೇ ಆದ ವೈಶಿಷ್ಟ್ಯವೆಂಬುದು ಸ್ಪಷ್ಟವಾಗಿದೆ. ಅವರ ಭಕ್ತರಲ್ಲಿ ಸ್ತ್ರೀಯರಿದ್ದಾರೆ, ಪುರುಷರಿದ್ದಾರೆ; ಬಾಲಕರಿದ್ದಾರೆ, ವೃದ್ಧರಿದ್ದಾರೆ; ಬಡವರಿದ್ದಾರೆ, ಬಲ್ಲಿದರಿದ್ದಾರೆ. ಅಧಿಕಾರದಲ್ಲಿರುವ ಜನರಿದ್ದಾರೆ. ಹಳ್ಳಿಗಳಲ್ಲಿಯ ಜನರಿದ್ದಾರೆ, ಪಟ್ಟಣದಲ್ಲಿರುವವರಿದ್ದಾರೆ. ಕರ್ಣಾಟಕದ ಜನರಿದ್ದಾರೆ, ಉಳಿದ ಪ್ರಾಂತದ ಜನರಿದ್ದಾರೆ; ವೈಷ್ಣವರಿದ್ದರೆ, ಉಳಿದ ಮತದವರಿದ್ದಾರೆ. ಇಷ್ಟೇ ಏಕೆ, ಉಳಿದ ಜಾತಿಯ ಜನರೂ ಇದ್ದಾರೆ. ಸೇವೆ ಮಾಡುವವರಿಗೆ ಅವರವರ ಭಕ್ತಿಗೆ ತಕ್ಕಂತೆ ಅನುಗ್ರಹ ಮಾಡುವವರೆಂದೇ ಅವರ ಪ್ರಸಿದ್ಧ ಪರಮಾತ್ಮನ ಸಂಕಲ್ಪವೂ ಹಾಗೆಯೇ! **ಭಕ್ತ್ಯೈವ ತುಷ್ಟಿಮಭ್ಯೇತಿ ವಿಷ್ಣುಃ ನಾನ್ಯೇನ ಕೇನಚಿತ್** – ವಿಷ್ಣುವು ಕೇವಲ ಭಕ್ತಿಯಿಂದಲೇ ಒಲಿಯುವವನೇ ಹೊರತು ಬೇರೆ ಯಾವುದರಿಂದಲೂ ಅಲ್ಲ ಎಂಬುದು ಪ್ರಮಾಣ: ಅರ್ಜುನನಿಗೆ ಕೃಷ್ಣ ಹೇಳುತ್ತಾನೆ : **ಭಕ್ತ್ಯಾ ತ್ವನನ್ಯಯಾ ಶಕ್ಯಃ ಅಹಮೇವಂವಿಧೋಽರ್ಜುನ । ಜ್ಞಾತುಂ ದ್ರುಷ್ಟುಂ ಚ ತತ್ವೇನ ಪ್ರವೇಷ್ಟುಂ ಚ ಪರಂತಪ ॥** ತನ್ನ ಜ್ಞಾನವಾಗಬೇಕಾದರೆ ಅನನ್ಯ ಭಕ್ತಿ ಇರಬೇಕೆಂಬುದೇ ಅವನ ಸಂಕಲ್ಪ ! **ಧ್ರ್ಮೋ ಭವತ್ಯಧರ್ಮೋಽಪಿ ಕೃತೋ ಭಕ್ತೈಃ ತವಾಚ್ಯುತ । ಪಾಪಂ ಭವತಿ ಧರ್ಮೋಽಪಿ ಯೋ ನ ಭಕ್ತೈಃ ಕೃತೋ ಹರೇಃ ॥** ಭಕ್ತರು ಮಾಡಿದ ಅಧರ್ಮದಂತೆ ತೋರುವ ಕೆಲಸಗಳೆಲ್ಲ ಧರ್ಮದ ಕಾರ್ಯಗಳೇ ಆಗಿಬಿಡುವವು, ಅದೇ ಅಭಕ್ತರು ಮಾಡಿದ ಧಾರ್ಮಿಕ ಕಾರ್ಯಗಳೆಂದು ತೋರುವ ಕಾರ್ಯಗಳೆಲ್ಲ ಅಧರ್ಮವೆಂದೇ ಪರಿಗಣಿಸಲ್ಪಡುತ್ತವೆ. ಇದು ಶ್ರೀಮನ್ಮಧ್ವಾಚಾರ್ಯರು ತಮ್ಮ **ಸದಾಚಾರಸ್ಮೃತಿ** ಎಂಬ ಗ್ರಂಥದಲ್ಲಿ ಹೇಳಿದ ಮಾತು. ಪರಮ ಕರುಣಾಳುಗಳಾದ ಶ್ರೀರಾಯರು ಪರಮಾತ್ಮನ ಈ ಸಂಕಲ್ಪವನ್ನೇ ಹಾಗೂ ಶ್ರೀಮದಾಚಾರ್ಯರು ಪ್ರತಿಪಾದಿಸಿದ ತತ್ವವನ್ನೇ ಅನುಸರಿಸಿದ್ದಾರೆ. ಅವರದೂ ಅದೇ ಸಂಕಲ್ಪ. ಶ್ರೀರಾಯರ ಈ ವ್ಯಕ್ತಿತ್ವವನ್ನು ಅನೇಕ ದಾಸರು ಬಹಳ ಮಾರ್ಮಿಕವಾಗಿ ತಮ್ಮ ಅನೇಕ ಪದಗಳಲ್ಲಿ ವರ್ಣಿಸಿದ್ದಾರೆ. ಶ್ರೀಗೋಪಾಲದಾಸರು ರಥವಾನೇರಿದ ರಾಘವೇಂದ್ರ ಎಂಬ ಪದದಲ್ಲಿ ಹೀಗೆ ಹೇಳುವರು:

**ಚತುರ ದಿಕ್ಕು ವಿದಿಕ್ಕುಗಳಲ್ಲಿ ಸ್ಮರಿಸುವ ಜನರಿಲ್ಲಿ, ಮಿತಿ ಇಲ್ಲದೆ ಬಂದು ಓಲೈಸುತಲಿ, ವರವಾ ಬೇಡುತಲಿ, ತುತಿಸುತ ಪರಿ ಪರಿ ನತರಾಗಿಹರಿಗೆ ಗತಿನೀಡದೆ ಸರ್ವಥ ನಾ ಬಿಡೆನೆಂದು ॥ – ರಥವಾನೇರಿದಾ ರಾಘವೇಂದ್ರ ರಾಯಾ ಗುಣಸಾಂದ್ರಾ ॥**

ಬಂದ ಭಕ್ತರನ್ನೆಲ್ಲ ಈ ರೀತಿ ಸಮಾನತೆಯಿಂದ ಕಾಣುವುದೇ ಶ್ರೀರಾಯರ ವೈಶಿಷ್ಟ್ಯ. ಅದೇ ಪದದಲ್ಲಿ ಮುಂದೆ ಅವರನ್ನು **ಪತಿತೋದ್ಧಾರಿಯೆ ಪಾವನಕಾರಿಯೆ** ಎಂದು ವರ್ಣಿಸಿದ್ದಾರೆ. ಶ್ರೀಗೋಪಾಲದಾಸರೇ ತಮ್ಮ ಶ್ರೀರಾಯರ ಸುಳಾದಿಯಲ್ಲಿ **''ತನ್ನ ಶರಣರ ಪಾಲಿಸುತಿರುತಿಪ್ಪನಿಲ್ಲಿ'** ಎಂದು ಘೋಷಿಸಿದ್ದಾರೆ. ಪರಮಾತ್ಮನೇ ಅವರಲ್ಲಿ ನಿಂತು ಮಂದಜನರನ್ನು ಕಾಪಾಡುತ್ತಿರುವನೆಂದು ಮಂದ ಜನರನು **ಪೊರೆಯಲ್ಲಿನ್ನು, 'ಒಂದು ರೂಪದಿ ಬಂದು ಬಂದು ಹರಿಯು ನಾನಿಲ್ಲಿ ನಿಂದು, ಒಂದು ರೂಪದಿ ಸುಂದರಾಂಗ ಗೋಪಾಲವಿಟ್ಠಲ ತಂದು ಫಲವನೀವುತಿಪ್ಪ ॥'** ಎಂದು ಶ್ರೀರಾಯರ ಸಮಭಾವದ ರಹಸ್ಯವನ್ನು ವಿವರಿಸಿದ್ದಾರೆ. **ಕರುಣಿ ಕಾಯೋ ರಾಘವೇಂದ್ರಗುರುವೇ** ಎಂಬ ಪದ್ಯದಲ್ಲಿ ಶ್ರೀರಾಯರನ್ನು ಗೋಪಾಲದಾಸರು **'ಆರ್ತಜನರ ಪಾಲ ಅತಿದಯಾಪಾಂಗ ಎಂದೂ ಕೃಪಣವತ್ಸಲ'** ಎಂದೂ ವರ್ಣಿಸಿದ್ದಾರೆ. ಆರ್ತರು ಯಾರೇ ಆಗಿದ್ದರೂ ಅವರನ್ನು ಪೊರೆಯುವ ಭಾರವನ್ನು ಶ್ರೀರಾಯರು ವಹಿಸಿಕೊಂಡಿದ್ದಾರೆ. **ಶರಣು ಶರಣು ರಾಘವೇಂದ್ರಗುರುರಾಯ** ಎಂಬ ಪದದಲ್ಲಿ ಶ್ರೀರಾಯರನ್ನು – **ಮರುತಾಂತರ್ಗತ ಗುರುಗೋಪಾಲವಿಟ್ಠಲನ್ನ ಸರುವಸ್ಥಾನದಿ ಸಮದರ್ಶಿ** ಎಂದು ವರ್ಣಿಸಿದ್ದಾರೆ. ಅವರ ವ್ಯಕ್ತಿತ್ವವನ್ನು ಇನ್ನೂ ಹೆಚ್ಚು ಸ್ಪಷ್ಟವಾಗಿ ಹೀಗೆ ಹೇಳಿದ್ದಾರೆ: **'ಫಲ ಬೇಡಿ ಸೇವೆ ಮಾಡುವ ದಾಸನಲ್ಲ, ಫಲಕೆ ಸೇವೆಯ ಸ್ವೀಕರಿಸುವ ಸ್ವಾಮಿ ನೀನಲ್ಲ'** ತಾವೂ ಕೂಡ ಫಲಾಪೇಕ್ಷೆಗಳಾಗಿ ಪರಮಾತ್ಮನ ಸೇವೆ ಮಾಡಿಲ್ಲ ಮತ್ತು ಹಾಗೆ ಫಲಾಪೇಕ್ಷಿಗಳಾದವರಿಂದ ಸೇವೆಯನ್ನು ಸ್ವೀಕರಿಸುವವರೂ ಅವರಲ್ಲ ಎಂಬ ಮಾರ್ಮಿಕ ಮಾತು ಇಲ್ಲಿದೆ. ನಿರ್ವ್ಯಾಜ ಭಕ್ತಿಯಿಂದ ಸೇವೆ ಮಾಡುವದೇ ಸೇವೆ ಎನಿಸಿಕೊಳ್ಳುವದು. ಜಗನ್ನಾಥದಾಸರ ಪದದಲ್ಲಿಯೂ ಈ ಭಾವ ವ್ಯಕ್ತವಾಗಿದೆ : **'ಆರಾಧಿಪ ಭಕ್ತರಭೀಷ್ಟವ ಪೂರೈಸುವ ಪ್ರಭುವೇ ಬಾರೋ' ..... ಪ್ರಪನ್ನ ಜನರ ಪ್ರಭುವೇ ಬಾರೋ,** ಎಂದು ಅವರನ್ನು ದಾಸರು ಕರೆದಿದ್ದಾರೆ. **ವಂದಿಪ ಜನರಿಗೆ ಮಂದಾರ ತರುವಂತೆ, ಕುಂದದಭೀಷ್ಟೆಯ**

ಸಲಿಸುತಿಪ್ಪ ಎಂದು ಅವರನ್ನು ಇನ್ನೊಂದು ಪದ್ಯದಲ್ಲಿ ಶ್ರೀಜಗನ್ನಾಥ ದಾಸರೇ ಕೊಂಡಾಡಿದ್ದಾರೆ. **ಶ್ರೀಮದಾಚಾರ್ಯರ ತತ್ವವನ್ನು ತೋರಿದಿ ಸರ್ವರಿಗೆ ನ್ಯಾಯದಿಂದ** ಎಂದು ಅವರ ಸಮಭಾವವನ್ನು ಹೊಗಳಿದ್ದಾರೆ. ಅವರೇ ತಮ್ಮ **ರಾಘವೇಂದ್ರ ಯತಿ ಸಾರ್ವಭೌಮ ...** ಎಂಬ ಸಂಸ್ಕೃತಮಯ ಪದ್ಯದಲ್ಲಿ **'ಕ್ಲೇಶಿತ ಜನಪರಿಪಾಲ ನಮೋ ನಮೋ ಭಾಸಿತಕರುಣಾ ಶೀಲ ನಮೋ'** ಎಂದು ಸಂಕಟದಲ್ಲಿರುವ ಎಲ್ಲ ಭಕ್ತರನ್ನೂ ಪರಿಪಾಲಿಸುವ ಕರುಣಾಸಾಗರರು ಗುರುರಾಜರು ಎಂದು ವರ್ಣಿಸಿ ನಮಿಸಿದ್ದಾರೆ. ಪ್ರಾಣೇಶವಿಟ್ಠಲರು ಅವರನ್ನು **'ಸಾರುವ ಶರಣರ ಘೋಶಿಸುತಿಪ್ಪ ಸಂಸಾರ ಕಡಲಿಗೆ ಕರೀರಸಂಭವನೇ'** ಎಲ್ಲ ಶರಣಾಗತರಿಗೆ ಸಂಸಾರಸಾಗರವನ್ನು ನಾಶಗೊಳಿಸುವ ವಿಷಯದಲ್ಲಿ ಸಮುದ್ರವನ್ನೇ ಕುಡಿದುಬಿಟ್ಟ ಅಗಸ್ತ್ಯರಂತೆ ಇರುವಿರಿ ಎಂದು ವರ್ಣಿಸಿದ್ದಾರೆ. ಹೀಗೆ ಸಂಸಾರದ ಭಾಧೆಯನ್ನು ಹೋಗಲಾಡಿಸುವ ವಿಷಯದಲ್ಲಿ ಭೇದಭಾವ ಮಾಡದೇ ಅವರವರ ಭಕ್ತಿಗನುಗುಣವಾಗಿ ಫಲ ಕೊಡುವ ಮಾಹಾಮಹಿಮರು ಎಂದು ಹೇಳಿದ್ದಾರೆ. ಹೀಗೆಯೇ ಮುಂದೆ ಆಗಿ ಹೋದ ಅನೇಕ ದಾಸರು ಶ್ರೀರಾಯರ ಈ ಸಮಭಾವವನ್ನು ಮನ ತುಂಬಿ ಕೊಂಡಾಡಿದ್ದಾರೆ. ಶ್ರೀರಾಯರು ತಮ್ಮ ಪೂರ್ವದ ಅವತಾರಗಳಲ್ಲಿಯೂ ಕೂಡಾ ಈ ಪ್ರಕಾರದ ಸಮಭಾವದ ಹಾಗೂ ತಾವು ಪತಿತೋದ್ಧಾರರೆಂಬ ಬಗ್ಗೆ ಅನೇಕ ದೃಷ್ಟಾಂತಗಳನ್ನು ತೋರಿಸಿದ್ದಾರೆ. ಪ್ರಹ್ಲಾದ ರಾಜರಾಗಿದ್ದಾಗ ದೈತ್ಯಕುಲದಲ್ಲಿ ಜನಿಸಿದ ಬಾಲಕರಿಗೆ ತಾರಕವಾದ ಭಾಗವತಧರ್ಮವನ್ನು ಉಪದೇಶಿಸಿ ಅವರನ್ನು ಅನುಗ್ರಹಿಸಿದರು. ವ್ಯಾಸರಾಯರಾಗಿದ್ದಾಗ ಅಂತ್ಯಜನಾಗಿ ಹುಟ್ಟಿದ್ದರೂ ಪರಮಭಾಗವತೋತ್ತಮರಾದ ಕನಕದಾಸರ ಜೊತೆಗೆ ಗೂಢ ಪ್ರಮೇಯಗಳನ್ನು ಚರ್ಚಿಸಿ ಅವರಿಗೆ ಉಪದೇಶ ಮಾಡಿದರು. ಅದೇ ಕನಕದಾಸರು ಮುಂದಿನ ಜನ್ಮದಲ್ಲಿ ಅಂತ್ಯಜಭಕ್ತರಾಗಿ ಹುಟ್ಟಿ ಶ್ರೀರಾಯರ ಹತ್ತಿರ ಬಂದು ಚಾತುರ್ಮಾಸದ ಮೊದಲನೇ ತಿಂಗಳಿನ ಶಾಕವ್ರತದ ಸಂದರ್ಭದಲ್ಲಿ ತಾನು ಬೆಳೆದ ಸಾಸುವೆಯನ್ನು ಭಕ್ತಿಯಿಂದ ಸಮರ್ಪಿಸಿದಾಗ ಶ್ರೀರಾಯರು ಮೊದಲನೆಯ ವ್ರತದಲ್ಲಿ ಸಾಮಾನ್ಯವಾಗಿ ಅಡುಗೆಯಲ್ಲಿ ಉಪಯೋಗಿಸಬಾರದೆಂಬ ನಿಯಮವಿದ್ದರೂ ಕೂಡ ಸಾಸುವೆಯ ವಗ್ಗರಣೆಯನ್ನು ಹಾಕಿದ ಅಡುಗೆಯನ್ನು ದೇವರಿಗೆ ಸಮರ್ಪಿಸಿ ತಾವೂ ಕೂಡ ಅದನ್ನು ಸ್ವೀಕರಿಸಿದರು ಎಂಬುದು ಎಲ್ಲರಿಗೂ ತಿಳಿದ ವಿಷಯ. ಅಂದಿನಿಂದ ಶ್ರೀರಾಯರ ಮಠದಲ್ಲಿ ಮೊದಲನೆಯ ವ್ರತದಲ್ಲಿ ಸಾಸುವೆಯನ್ನು ಸ್ವೀಕರಿಸುವ ಕ್ರಾಂತಿಕಾರಿಯಾದ

ಸಮಭಾವವನ್ನು ಹೊಂದಿದ ಗುರುಗಳೆಂದರೆ ಶ್ರೀರಾಘವೇಂದ್ರ ಗುರುಸಾರ್ವಭೌಮರು. **ಧರ್ಮೋ ಭವತ್ಯಧರ್ಮೋಽಪಿ ಕೃತೋ ಭಕ್ತೈಸ್ತವಾಚ್ಯುತ** ಎಂದು ಮೇಲೆ ಉದಾಹರಿಸಿದ ಸೂಕ್ತಿಗೆ ಶ್ರೀರಾಯರ ಈ ಚರಿತ್ರೆಯು ದೃಷ್ಟಾಂತವಾಗುವುದು. ಶ್ರೀರಾಯರ ಸಮಭಾವದ ರಹಸ್ಯವನ್ನು **ಗುರುಶ್ರೀಶವಿಟ್ಠಲಾಂಕಿತರು ''ನೋಡಲೆ ಮನವೆ ಕೊಂಡಾಡು ಗುರುಗಳ ಪಾದ''** ಎಂಬ ಪದದಲ್ಲಿ **ಪರಮಸ್ಮಜ್ಞಾನಿಗಳಿಗೀ ಫಲವು ದೊರಕುವುದು ತರತಮದಿ ಇತರ ಜನಕೆ** ಎಂದು ಹೇಳಿ ವಿವರಿಸಿದ್ದಾರೆ. Unequa; treatment of unequals ಎಂಬುದೂ ಕೂಡ equality ರಹಸ್ಯವಷ್ಟೆ ! ಶ್ರೀರಾಯರ ಸಮದರ್ಶಿತ್ವವು ಸಮಾನತೆಯ ಈ ತತ್ವದ ಮೇಲೆಯೇ ಆಧರಿಸಲ್ಪಟ್ಟಿದ್ದನ್ನು ಗಮನಿಸಬೇಕು.

ಎಲ್ಲ ದಾಸರೂ ಕೂಡ ಶ್ರೀರಾಯರ ಸೇವಾಭಾಗ್ಯ ದೊರೆಯುವುದು ಭಕ್ತಿ ಇರುವ ಸಾತ್ವಿಕಚೇತನರಿಗೆ ಮಾತ್ರ ಎಂದು ಘಂಟಾಘೋಷವಾಗಿ ಸಾರಿದ್ದಾರೆ. ಶ್ರೀದವಿಟ್ಠಲರು ಹೇಳಿದಂತೆ **'ಮಂದಭಾಗ್ಯರಿಗೆ ದೊರೆಯದಿವರ ಸೇವಾ ಶರಣರ ಸಂಜೀವ'** ಎಂದು ಎಲ್ಲ ದಾಸರ ಸ್ಪಷ್ಟವಾದ ಮತ. **ಶ್ರೀರಾಘವೇಂದ್ರಃ ಸಕಲಪ್ರದಾತಾ ಸ್ವಪಾದ ಕಂಜದ್ವಯಭಕ್ತಿ ಮದ್ಭ್ಯಃ** – ಭಕ್ತಿಯಿಂಡ ಆರಾಧಿಸುವವರಿಗೆ ಮಾತ್ರ ಗುರುರಾಜರು ಸಕಲಪ್ರದಾತೃಗಳು ಎಂದು ಶ್ರೀ ಅಪ್ಪಣ್ಣಾಚಾರ್ಯರ ಸ್ಪಷ್ಟವಾದ ಅಭಿಪ್ರಾಯ.

ಶ್ರೀರಾಯರಿಗೆ ಈ ತರಹ ಮಹಿಮೆ ಹೇಗೆ ಬಂದಿತು ಎಂಬುದನ್ನು ಶ್ರೀಅಪ್ಪಣ್ಣಾಚಾರ್ಯರು ಗುರುಸ್ತೋತ್ರದಲ್ಲಿ **'ಶ್ರೀರಾಘವೇಂದ್ರೋ ಹರಿಪಾದಕಂಜನಿಷೇವಣಾತ್ ಲಬ್ಧಸಮಸ್ತ ಸಂಪತ್'** – ಶ್ರೀ ರಾಯರು ಪರಮಾತ್ಮನಲ್ಲಿ ಮಾಡಿದ ಭಕ್ತಿಯುತ ಸೇವೆಯ ಕಾರಣದಿಂದಲೇ ಈ ರೀತಿಯ ಶಕ್ತಿಯನ್ನೂ ಈ ರೀತಿಯ ಮಹಿಮೆಯನ್ನೂ ಪಡೆದವರಾಗಿದ್ದಾರೆ ಎಂದು ಬಹಳ ಸೂಕ್ಷ್ಮವಾಗಿ ತಿಳಿಸಿದ್ದಾರೆ. **ಪ್ರಹ್ಲಾದೋನಿತ್ಯಭಕ್ತಿಮಾನ್** ಎಂದು ಶ್ರೀರಾಯರ ಹಿಂದಿನ ಅವತಾರದ ಬಗ್ಗೆ ಶ್ಲಾಘನೆ ಪ್ರಸಿದ್ಧವಾಗಿದೆ. ಅವರ ಇಂದು **ಎನಗೆ ಗೋವಿಂದ** ಎಂಬ ಪದದಿಂದ ಅವರು ಪರಮಾತ್ಮನಲ್ಲಿ ಎಷ್ಟು ಆಳವಾದ ಶರಣಾಗತಿ ಭಾವವನ್ನು ಹೊಂದಿದ್ದರು ಹಾಗೂ ಅವರು ಹೇಗೆ ಪರಮಾತ್ಮನಲ್ಲಿ ಅನನ್ಯವಾದ ನಿಷ್ಕಲ್ಮಷದ

ಭಕ್ತಿಯನ್ನು ಮಾಡುವ ಸ್ವಭಾವದವರಾಗಿದ್ದರು ಎಂಬುದರ ಪರಿಚಯವಾಗುವುದು. ಅವರ ಬೃಂದಾವನವೆಂದರೆ ಪರಮಾತ್ಮನ ರೂಪಗಳ ಅಧಿಷ್ಠಾನ. ಶ್ರೀಮದಾಚಾರ್ಯರ, ಶ್ರೀಟೀಕಾಕೃತ್ಪಾದಾದಿ ಸರ್ವಗುರುಗಳ ಪರಮ ಪುಣ್ಯತಮ ಸನ್ನಿಧಿ, ಅಂತೆಯೇ ಅವರ ಸೇವೆ ಮಾಡುವದೆಂದರೆ ಅವರ ದ್ವಾರಾ ಪರಮಾತ್ಮನ ಸೇವೆ ಮಾಡಿದಂತೆಯೇ. **ಪ್ರಹ್ಲಾದಶ್ಚಾಸ್ಮಿ ದೈತ್ಯಾನಾಮ್** ಎಂದು ಸ್ವತಃ ಶ್ರೀಕೃಷ್ಣನೇ ಪ್ರಹ್ಲಾದನು ತನ್ನ **ವಿಭೂತಿ ರೂಪನೆಂದು ಘೋಷಿಸಿದ್ದಾನೆ. ಇದೇ ಕಾರಣ ಭಕ್ತರಿಗೆ ಅವರವರ ಸೇವೆಯ** ಫಲಗಳನ್ನು ಸ್ವತಃ ಪರಮಾತ್ಮನೇ ರಾಯರ ದ್ವಾರಾ ಕೊಡುಸುವನೆಂಬುದನ್ನು ಅರಿಯಬೇಕು. ಅಂತು, ಶ್ರೀಗುರುರಾಜರು ಯಾವ ಭೇದಭಾವವಿಲ್ಲದೆ ಕೇವಲ ಭಕ್ತಿಯಿಂದ ಸೇವೆ ಮಾಡುವ ಎಲ್ಲರಿಂದ ಸೇವೆಯನ್ನು ಕೊಳ್ಳುವರು. ಅವರವರ ಯೋಗ್ಯತೆ ಸೇವೆಗಳಿಗೆ ತಕ್ಕ ಫಲಗಳನ್ನು ಅನುಗ್ರಹಿಸುವರು. ಶ್ರೀವೆಂಕಟೇಶ ದೇವರ ದರ್ಶನಕ್ಕೆ ಯಾವ ಭೇದ ಭಾವವಿಲ್ಲದೆಯೇ ಎಲ್ಲರೂ ಹೋಗುತ್ತಿರುವುದು ಕಂಡು ಬರುವುದು. ಅದೇ ರೀತಿ ಹನುಮಂತ ದೇವರ ಗುಡಿಗಳಿಗೂ ಕೂಡ ಎಲ್ಲ ಪ್ರಕಾರದ ಭಕ್ತರು ಬಂದು ಸೇರುವರು. ಅದೇ ಪ್ರಕಾರ ಗುರುಗಳಲ್ಲಿ ಎಲ್ಲರಿಂದ ಸೇವೆ ಸ್ವೀಕರಿಸುವ ಏಕೈಕ ಗುರುಗಳೆಂದರೆ **ಶ್ರೀರಾಘವೇಂದ್ರಸ್ವಾಮಿಗಳು** ಎಂಬುದು ಸ್ಪಷ್ಟವಾಗಿದೆ. ಗುರುಗಳ ಈ ಸಮಭಾವವು ಬಲು ವೈಶಿಷ್ಟ್ಯಪೂರ್ಣವಾದುದು. ಇದು ಅವರ ಕಾರುಣ್ಯದ ಇನ್ನೊಂದು ಮುಖ.

ಶ್ರೀರಾಯರ ಈ ಸಮಭಾವದ ವ್ಯಕ್ತಿತ್ವವು ಅವರ ಗ್ರಂಥಗಳಿಂದಲೂ ಸ್ಪಷ್ಟವಾಗುವುದು. ಈ ಮೊದಲು ಇನ್ನೊಂದು ಸಂದರ್ಭದಲ್ಲಿ ತಿಳಿಸಿದಂತೆ ತಮ್ಮ ಗ್ರಂಥಗಳಲ್ಲಿ ಅವರೆಂದಿಗೂ ಬೇರೆ ಗ್ರಂಥಕಾರರ ಬಗ್ಗೆ ಮೂದಲಿಕೆಯ ಮಾತನ್ನಾಗಲಿ ಲಘುವಾಗಿ ಬರೆಯುವದಾಗಲಿ ಮಾಡುವುದಿಲ್ಲ. ಅವರವರ ಅಭಿಪ್ರಾಯವನ್ನು ತಮ್ಮ ಭಾಷೆಯಲ್ಲಿ ತಿಳಿಯಾಗಿ ವಿವರಿಸಿ ಹೇಳುವದಲ್ಲದೆ ಬೇರೆ ಬೇರೆ ಗ್ರಂಥಕಾರರಲ್ಲಿ ಬೇರೆ ಬೇರೆ ಅಭಿಪ್ರಾಯ ತೋರುವಂತಿದ್ದರೆ ಅವುಗಳನ್ನು ಸಮನ್ವಯ ಮಾಡುವ ದೃಷ್ಟಿಕೋನವನ್ನೇ ಹೊಂದಿರುವವರು ಶ್ರೀರಾಯರು. ಶ್ರೀರಾಯರಿಗೆ ಕೇವಲ ಟಿಪ್ಪಣ್ಣ್ಯಾಚಾರ್ಯಚಕ್ರವರ್ತಿಗಳೆಂದು ಕರೆಯುವದಲ್ಲದೆ ಅವರು ಸಮನ್ವಯ ಸಾರ್ವಭೌಮರೆಂದೂ ಕರೆಯಬಹುದು. ಇಷ್ಟು ತಾತ್ವಿಕ ಶಿಖಾಮಣಿಗಳು ಶ್ರೀರಾಯರು.

ಹೀಗೆ ಪರಮ ಸಾತ್ವಿಕಶೀಖಾಮಣಿಗಳೂ ಅತ್ಯಂತ ದಯಾಲುಗಳೂ ಆದ ಶ್ರೀರಾಯರನ್ನು ಅವರ ಗುಣಗಳನ್ನು ಹಾಗೂ ಮಹಿಮೆಯನ್ನು ತಿಳಿದುಕೊಂಡು ಮತ್ತು ಆರಾಧಿಸುವ ಕ್ರಮವನ್ನು ತಿಳಿದುಕೊಂಡು ಆರಾಧನೆ ಮಾಡಿದರೆ ಅದಕ್ಕೆ ಬರುವ ಫಲ ವಿಶೇಷ ಎಂದು ಬೇರೆ ಹೇಳಬೇಕಾಗಿಲ್ಲ. ಅವರ ಸ್ತೋತ್ರವನ್ನು ಅವರ ಮೇಲೆ ರಚಿಸಿಲ್ಪಟ್ಟ ಹರಿದಾಸರ ಹಾಡುಗಳನ್ನು ಕೂಡ ಅರ್ಥಾನುಸಂಧಾನದಿಂದ ಪಠಿಸಿದರೆ ಮತ್ತು ಮನನ ಮಾಡಿದರೆ ಅವರಲ್ಲಿ ಭಕ್ತಿಯು ಅಧಿಕವಾಗುವುದು. ಶ್ರೀರಾಯರ ವಿಶೇಷಾನುಗ್ರಹಕ್ಕೆ ಇನ್ನೊಂದು ಮುಖ್ಯ ದಾರಿಯಾಗುವುದು.

Typeset by Sri B.Ramanatha Bangalore

|| Sri Krishnarpanamasthu||